## ನಿಮ್ಮೊಡನೆ

# ತುರ್ತು ನಿಗಾಘಟಕ ದೂರದ ಹಾದಿಯಲ್ಲ...

ದೇಶದ ಶ್ವಾಸಕೋಶಗಳಂತಿರುವ ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಬಗ್ಗೆ ದೃಢ ನಿರ್ಧಾರ ಕೈಗೊಳ್ಳುವುದು ಸರ್ಕಾರಗಳಿಗೆ ಸಾಧ್ಯವಾಗುತ್ತಿಲ್ಲ. ಈ ಸಂಗತಿ, ಭಾರತೀಯ ರಾಜಕಾರಣ ಕಲುಷಿತಗೊಂಡಿರುವುದಕ್ಕೂ ವೈಚಾರಿಕ ದಿವಾಳಿತನಕ್ಕೂ ನಿದರ್ಶನದಂತಿದೆ.

ಭಾರತದ ನಗರಗಳ ಆರೋಗ್ಯ ಬಿಗಡಾಯಿಸಿರುವುದನ್ನು 2022ರ ಸಾಲಿನ ‘ಜಾಗತಿಕ ವಾಯು ಗುಣಮಟ್ಟ ವರದಿ’ ಒತ್ತಿಹೇಳುತ್ತಿದೆ. ವಿಶ್ವದ ‘ಟಾಪ್ 20’ ವಾಯುಮಾಲಿನ್ಯಪೀಡಿತ ನಗರಗಳ ಪಟ್ಟಿಯಲ್ಲಿ ಭಾರತದ ದೆಹಲಿ, ಕೋಲ್ಕತ್ತ ಹಾಗೂ ಮುಂಬೈ ಸ್ಥಾನಪಡೆದಿವೆ. ದೆಹಲಿ ಮತ್ತು ಕೋಲ್ಕತ್ತ ಮೊದಲೆರೆಡು ಸ್ಥಾನಗಳಲ್ಲಿದ್ದರೆ, ಮುಂಬೈ ಹದಿನಾಲ್ಕನೇ ಸ್ಥಾನದಲ್ಲಿದೆ. ಈ ಪಟ್ಟಿಯಲ್ಲಿ ವಿಶ್ವದ ಬೇರೆ ಯಾವುದೇ ದೇಶದ ಒಂದಕ್ಕಿಂತ ಹೆಚ್ಚು ನಗರ ಇಲ್ಲ ಎನ್ನುವುದು ಗಮನಾರ್ಹ. ಮಹಾನಗರಗಳು ಮಾತ್ರವಲ್ಲ, ಭಾರತದಲ್ಲಿನ ಕಾನ್ಪುರ, ರೋಹ್ಟಕ್‌ನಂಥ ಸಣ್ಣ ನಗರಗಳು ಕೂಡ ಕುದಿಕುಲುಮೆಗಳಾಗಿವೆ ಎಂದು ವರದಿ ಹೇಳಿದೆ.


ದೇಶದ ಶ್ವಾಸಕೋಶಗಳು ಕೀವುಗಟ್ಟಿರುವುದರ ಬಗ್ಗೆ ಎಚ್ಚರಿಕೆಯ ಗಂಟೆ ಮೊಳಗುತ್ತಿರುವುದು ಇದು ಮೊದಲೇನಲ್ಲ. ವಾಯುಮಾಲಿನ್ಯ ತಡೆಗಟ್ಟುವಲ್ಲಿ ಭಾರತದ ಸಾಧನೆ ಕಳಪೆಯಾಗಿರುವುದನ್ನು ಇತ್ತೀಚಿನ ವರ್ಷಗಳ ‘ವಿಶ್ವ ವಾಯು ಗುಣಮಟ್ಟದ ಸೂಚ್ಯಂಕ’ಗಳು ಮತ್ತೆ ಮತ್ತೆ ಗಮನಕ್ಕೆ ತರುತ್ತಿವೆ. ವಾಯುಮಾಲಿನ್ಯದ ಜಾಗತಿಕ ಪರಿಣಾಮಗಳನ್ನು ವಿಶ್ಲೇಷಿಸುವ ‘ಹೆಲ್ತ್ ಎಫೆಕ್ಟ್ ಇನ್‌ಸ್ಟಿಟ್ಯೂಟ್’ನ (ಎಚ್‌ಇಇ) 2019ರ ವರದಿ, ಭಾರತದ ಬಹುದೊಡ್ಡ ಸಂಕಟವಾಗಿ ವಾಯುಮಾಲಿನ್ಯ ಪರಿಣಮಿಸಿರುವುದಾಗಿ ಹೇಳಿತ್ತು. ವಾಯುಮಾಲಿನ್ಯದ ಪರಿಣಾಮದಿಂದಾಗಿ 2019ರಲ್ಲಿ 1.16 ಲಕ್ಷ ನವಜಾತ ಶಿಶುಗಳು ಭಾರತದಲ್ಲಿ ಮರಣಹೊಂದಿರುವುದನ್ನು ‘ಎಚ್‌ಇಇ’ ಗುರ್ತಿಸಿತ್ತು. ಮಕ್ಕಳ ಮೆದುಳು, ಶ್ವಾಸಕೋಶ ಸೇರಿದಂತೆ ವಿವಿಧ ಅಂಗಗಳ ಮೇಲೆ ಕಲುಷಿತ ಗಾಳಿ ಪರಿಣಾಮ ಬೀರುತ್ತಿದ್ದು, ಎಳೆಯರ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕುಂಠಿತಗೊಳ್ಳುತ್ತಿರುವುದಾಗಿ ವರದಿ ಎಚ್ಚರಿಸಿತ್ತು. 2019ರಲ್ಲಿ ವಾಯುಮಾಲಿನ್ಯದಿಂದಾಗಿ ಸುಮಾರು 16 ಲಕ್ಷ ಸಾವು ಹಾಗೂ ಜಲಮಾಲಿನ್ಯದಿಂದಾಗಿ 5 ಲಕ್ಷ ಸಾವು ಭಾರತದಲ್ಲಿ ಸಂಭವಿಸಿವೆ ಎಂದು ‘ಲಾನ್ಸೆಟ್’ ವರದಿ ಅಂದಾಜು ಮಾಡಿದೆ. ಉಸಿರಾಟ ಸಂಬಂಧಿ ಸಮಸ್ಯೆಗಳಿಂದ ಬಳಲುವವರ ಸಂಖ್ಯೆಯಲ್ಲೂ ಭಾರತ ಮುಂಚೂಣಿಯಲ್ಲಿದೆ. ಈ ಅಂಕಿಅಂಶಗಳಿಂದ ನಾವು ಎಚ್ಚರಗೊಂಡಿದ್ದೇವೆಯೆ?

ಕಂದಮ್ಮಗಳ ಸಾವು–ನೋವು ಹಾಗೂ ದೇಶದ ಶೇ. 76ಕ್ಕೂ ಹೆಚ್ಚು ನಾಗರಿಕರು ವಾಯುಮಾಲಿನ್ಯ ನಿರಂತರವಾಗಿ ಹದಗೆಡುತ್ತಿರುವ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ ಎನ್ನುವ ಸಂಗತಿ ನಮ್ಮ ನಿದ್ದೆಗೆಡಿಸಬೇಕು. ದುರದೃಷ್ಟವಶಾತ್, ಪರಿಸರ ಮಾಲಿನ್ಯ ನಮ್ಮಲ್ಲಿ ಸಾರ್ವಜನಿಕ ಆತಂಕದ ವಿಷಯವಾಗಿ ಪರಿಗಣಿತವಾಗಿಲ್ಲ. ಸಾರ್ವಜನಿಕರ ಪಾಲಿಗೆ ಸದ್ಯದ ಮಟ್ಟಿಗಂತೂ ಪರಿಸರ ಸಂರಕ್ಷಣೆ ಭಾವನಾತ್ಮಕ ವಿಷಯವಾಗಿಯೇ ಉಳಿದಿದೆ. ಮಾನವೀಯ ಸಂವೇದನೆಯೇ ಜಡಗೊಂಡಿರುವ ಸರ್ಕಾರಗಳಿಗೆ ‘ಪರಿಸರ ಸಂರಕ್ಷಣೆ’ ಕಾಳಜಿಯ ವಿಷಯವಾಗುತ್ತದೆಂದು ನಿರೀಕ್ಷಿಸುವಂತಿಲ್ಲ. ಯಾವ ರಾಜಕೀಯ ಪಕ್ಷವೂ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಕಾರ್ಯಸೂಚಿ ಹೊಂದಿಲ್ಲ. ಸ್ವರ್ಗವನ್ನು ಮನೆ ಬಾಗಿಲಿಗೆ ತರುತ್ತೇವೆಂದು ಬಡಾಯಿ ಕೊಚ್ಚಿಕೊಳ್ಳುವ ರಾಜಕಾರಣಿಗಳ ಕಾರ್ಯಕ್ಷೇತ್ರದಲ್ಲಿ ಹಾಗೂ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳಲ್ಲಿ ಪರಿಸರದ ಸುಳಿವೇ ಇರುವುದಿಲ್ಲ. ದೇಶದ ಶ್ವಾಸಕೋಶಗಳಂತಿರುವ ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಬಗ್ಗೆ ದೃಢ ನಿರ್ಧಾರ ಕೈಗೊಳ್ಳುವುದು ಸರ್ಕಾರಗಳಿಗೆ ಸಾಧ್ಯವಾಗುತ್ತಿಲ್ಲ ಎನ್ನುವುದು ಭಾರತೀಯ ರಾಜಕಾರಣ ಕಲುಷಿತಗೊಂಡಿರುವುದಕ್ಕೂ ವೈಚಾರಿಕ ದಿವಾಳಿತನಕ್ಕೂ ನಿದರ್ಶನದಂತಿದೆ.

ವಾಯುಮಾಲಿನ್ಯ ನಗರಪ್ರದೇಶಗಳ ಸಮಸ್ಯೆಯಾಗಿ ಈಗ ಉಳಿದಿಲ್ಲ. ಮಾಲಿನ್ಯದ ವಿಷ ಊರುಕೇರಿಗಳ ನರನಾಡಿಗಳಿಗೂ ವ್ಯಾಪಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ದೊಡ್ಡ ಸಂಖ್ಯೆಯ ಹೆಣ್ಣುಮಕ್ಕಳಿಗೆ ಅಡುಗೆಕೋಣೆಯ ಇಂಗಾಲದ ವರ್ತುಲಗಳಿಂದ ಹೊರಬರುವುದು ಸಾಧ್ಯವಾಗಿಲ್ಲ. ವಿದ್ಯುತ್ ಒಲೆ, ಸೌರ ಒಲೆಗಳ ಬಳಕೆ ವಿರಳವಾಗಿರುವ ಗ್ರಾಮೀಣ ಪ್ರದೇಶಗಳಲ್ಲಿ, ಅಡುಗೆ ಅನಿಲ ಕೂಡ ಎಲ್ಲರಿಗೂ ದೊರೆತಿಲ್ಲ. ಅಡುಗೆ ಅನಿಲದ ಬೆಲೆ ಏರಿಕೆಗೆ ಅಂಕುಶ ಇಲ್ಲದಂತಾಗಿರುವ ಸಂದರ್ಭದಲ್ಲಿ, ಬಡ ಕುಟುಂಬಗಳ ಹೆಣ್ಣುಮಕ್ಕಳಿಗೆ ಸೌದೆ ಒಲೆಗಳ ಇಂಗಾಲಕ್ಕೆ ತಮ್ಮನ್ನೊಡ್ಡಿಕೊಳ್ಳುವುದೇ ಹೆಚ್ಚು ಸಹನೀಯ ಎನ್ನಿಸಿದಲ್ಲಿ ಆಶ್ಚರ್ಯವೇನಿಲ್ಲ.

ತ್ಯಾಜ್ಯಗಳ ದಹನ, ಕಾರ್ಖಾನೆಗಳು ಹಾಗೂ ವಾಹನಗಳು ಉಗುಳುವ ವಿಷಾನಿಲಗಳು, ನಿರ್ಮಾಣ ಕಾಮಗಾರಿಗಳು ಮತ್ತು ದೂಳು – ಇವೆಲ್ಲವೂ ವಾಯುಮಾಲಿನ್ಯಕ್ಕೆ ಗಣನೀಯ ಕೊಡುಗೆ ನೀಡುತ್ತಿವೆ. ವಾಯುಮಾಲಿನ್ಯ ನಿಯಂತ್ರಿಸುವಲ್ಲಿ ಮುಖ್ಯ ಪಾತ್ರ ವಹಿಸಬೇಕಾದ ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ‘ವಿಶ್ವ ಆರೋಗ್ಯ ಸಂಸ್ಥೆ’ ಗೊತ್ತುಪಡಿಸಿದ ಮಾನದಂಡಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎನ್ನುವುದನ್ನು ಗಮನಿಸಬೇಕು. ಸರ್ಕಾರ, ಸಮಾಜದ ಎರಡೂ ಕೈಗಳಿಂದ ದಾರುಣಗೊಂಡಿರುವ ಪರಿಸರ ಮಾಲಿನ್ಯದ ಬಿಕ್ಕಟ್ಟಿನ ಬಗ್ಗೆ ಇನ್ನಾದರೂ ನಾವು ಎಚ್ಚರಗೊಳ್ಳದೆ ಹೋದರೆ, ತುರ್ತು ನಿಗಾಘಟಕ ದೂರದ ಹಾದಿಯೇನಲ್ಲ.

■ ರಘುನಾಥ ಚ.ಹ.



ಈಶ್ವರ್